## ಬೈಬಲ್ ರಸಪ್ರಶ್ನೆ – 3

## ಯಕೋಬ, 1&2 ಪೇತ್ರ, 1,2,3,ಯೊವಾನ್ನ, ಯೂದ, ಪ್ರಕಟನೆ

1. ಯಾರಿಗಾದರೂ ಜ್ಞಾನದ ಕೊರತೆ ಇದ್ದರೆ, ಅವರು ಏನು ಮಾಡಬೇಕು?

    ಅ. ಪ್ರತಿದಿನ ಕಷ್ಟಪಟ್ಟು ಅಧ್ಯಯನ ಮಾಡಬೇಕು

    ಆ. **ಎಲ್ಲರಿಗೂ ಯಥೇಚ್ಛವಾಗಿ ನೀಡುವ ದೇವರಲ್ಲಿ ಬೇಡಿಕೊಳ್ಳಬೇಕು**

    ಇ. ಪವಿತ್ರಾತ್ಮರಿಗೆ ಸ್ತುತಿಗೀತೆ ಹಾಡಬೇಕು

    ಈ. ಮಾತೆ ಮಾರಿಯಳ ಮಧ್ಯಸ್ಥಿಕೆಯನ್ನು ಕೇಳಬೇಕು

2. ಸಂಕಟ ಶೋಧನೆಗಳನ್ನು ತಾಳ್ಮೆಯಿಂದ ಸಹಿಸಿಕೊಳ್ಳುವವರಿಗೆ ಸಿಗುವ ಪ್ರತಿಫಲವೇನು?

    ಅ. **ಅವರು ಸಜ್ಜೀವವೆಂಬ ಜಯಮಾಲೆಯನ್ನು ಪಡೆಯುತ್ತಾರೆ.**
    ಆ. ಅವರು ಅನ್ಯಜನರನ್ನು ಮತಾಂತರಗೊಳಿಸಲು ಸಾಧ್ಯವಾಗುತ್ತದೆ.
    ಇ. ಅವರು ದೇವರ ಬಲಗಡೆಯಲ್ಲಿ ಕುಳಿತುಕೊಳ್ಳಲು ಸಾಧ್ಯವಾಗುತ್ತದೆ.
    ಈ. ಅವರು ತಮ್ಮ ಶತ್ರುಗಳನ್ನು ಸೋಲಿಸಲು ಸಾಧ್ಯವಾಗುತ್ತದೆ.

3. ದೇವರ ವಾಕ್ಯವನ್ನು ಕೇಳುವವರ ಹಾಗು ಅನುಸರಿಸುವವರ ನಡುವೆ ಯಾಕೋಬರು ಯಾರನ್ನು ಬೆಂಬಲಿಸುತ್ತಾರೆ?

    ಅ. ದೇವರ ವಾಕ್ಯವನ್ನು ಕೇಳುವವರನ್ನು

    ಆ. **ದೇವರ ವಾಕ್ಯವನ್ನು ಅನುಸರಿಸುವವರನ್ನು**

    ಇ. ದೇವರ ವಾಕ್ಯವನ್ನು ಕೇಳುವವರ ಹಾಗು ಅನುಸರಿಸುವವರ ಬಗ್ಗೆ ಪ್ರಸ್ತಾಪಿಸುವುದಿಲ್ಲ

    ಈ. ಇಬ್ಬರನ್ನು ಬೆಂಬಲಿಸುವುದಿಲ್ಲ

4. ದೇವರ ಮುಂದೆ ನಿಷ್ಕಳಂಕವಾದ ಮತ್ತು ನಿರ್ಮಲವಾದ ಧರ್ಮ ಯಾವುದು?

ಅ. ಇತರ ಧರ್ಮಗಳನ್ನು ಗೌರವಿಸುವ ಮತ್ತು ಪೀಠದ ಮೇಲೆ ಬಲಿಯರ್ಪಿಸುವುದು.

ಆ. ಅವರು ನಂಬುವ ದೇವರನ್ನು ಇಡೀ ಜಗತ್ತಿಗೆ ಘೋಷಿಸುವುದು.

ಇ. ಮೋಕ್ಷವನ್ನು ಪಡೆಯಲು ಪ್ರಾರ್ಥನೆ, ಉಪವಾಸ ಮತ್ತು ತಪಸ್ಸು ಮಾಡುವುದು.

ಈ. **ಕಷ್ಟಸಂಕಟಗಳಲ್ಲಿರುವ ಅನಾಥರಿಗೂ ವಿಧವೆಯರಿಗೂ ನೆರವಾಗುವ ಹಾಗೂ ಪ್ರಾಪಂಚಿಕ ಮಲಿನತೆಯಿಂದ ದೂರವಿರುವುದು.**

5. ನಾವು ಒಲವು ತೋರುವ ಸಿರಿವಂತರು ನಮಗೆ ಏನು ಮಾಡುತ್ತಾರೆ?

ಅ. **ನಮ್ಮನ್ನು ತುಳಿದು ಹಿಂಸಿಸಿ ನ್ಯಾಯಾಲಯಕ್ಕೆ ಎಳೆಯುತ್ತಾರೆ**

ಆ. ಅಗತ್ಯವಿರುವ ಬಡವರಿಗೆ ಸಹಾಯಮಾಡುತ್ತಾರೆ

ಇ. ತಮ್ಮ ಎಲ್ಲಾ ಆಸ್ತಿಯನ್ನು ಮಾರಿ ಧರ್ಮಸಭೆಗೆ ನೀಡುತ್ತಾರೆ

ಈ. ಸೇಡು ತೀರಿಸಿಕೊಳ್ಳುತ್ತಾರೆ ಹಾಗೂ ತಮ್ಮನ್ನು ಅನುಸರಿಸದಿರುವವರನ್ನು ನಿಂದಿಸುತ್ತಾರೆ

6. ನ್ಯಾಯಕ್ಕೂ ಮಿಗಿಲಾಗಿ ವಿಜೃಂಭಿಸುವುದು ಯಾವುದು?

ಅ. ಸಂತೋಷ

ಆ. **ದಯೆ**

ಇ. ಜ್ಞಾನ

ಈ. ಬುದ್ಧಿವಂತಿಕೆ

7. ಸತ್ಕ್ರಿಯೆಗಳಿಲ್ಲದ ವಿಶ್ವಾಸ ಎಂಥವುದು?

**ಅ. ಸತ್ತವಿಶ್ವಾಸ**

ಆ. ಬಹಿರಂಗ ವಿಶ್ವಾಸ

ಇ. ಸಾತ್ವಿಕ ವಿಶ್ವಾಸ

ಈ. ಉಪಯುಕ್ತ ವಿಶ್ವಾಸ

8. ಮಾನವನು ದೇವರೊಡನೆ ಸತ್ಸಂಬಂಧವನ್ನು ಪಡೆಯುವುದು ಹೇಗೆ?

ಅ. **ವಿಶ್ವಾಸವು ಸತ್ಕ್ರಿಯೆಗಳೊಡನೆ ಬೆರೆತಾಗ**

ಆ. ದಯೆ ಮತ್ತು ಸಹಾನುಭೂತಿಗಳಿಂದ

ಇ. ಸಹನೆ ಮತ್ತು ಸಾಂತ್ವನದಿಂದ

ಈ. ಕುಟುಂಬ ಮತ್ತು ಸಮಾಜದಿಂದ

9. ನಾಲಿಗೆಯನ್ನು ಇದಕ್ಕೆ ಹೋಲಿಸಲಾಗಿದೆ...............

ಅ. ದೇಹಾಂಗ

ಆ. ಪವಿತ್ರಾತ್ಮ

ಇ. **ಬೆಂಕಿಯ ಕಿಡಿ**

ಈ. ಹಾವು

10. ಮರ್ಮಮತ್ಸರವೂ ಸ್ವಾರ್ಥಾಭಿಲಾಶೆಯೂ ಇರುವ ಕಡೆ ಏನಿರುತ್ತವೆ?

ಅ. **ಅಕ್ರಮಗಳು ಮತ್ತು ದುಶ್ಚಟಗಳು**

ಆ. ಅಸ್ವಸ್ಥತೆ ಮತ್ತು ನಿರುತ್ಸಾಹ

ಇ. ಜಗಳ ಮತ್ತು ಚಾಡಿ

ಈ. ಅಸಂತೋಷ ಮತ್ತು ಬಡತನ

11. ಲೋಕದೊಡನೆ ಗೆಳೆತನವನ್ನು ಬೆಳೆಸುವವನು..........................

ಅ. ದೇವರಿಂದ ಎಲ್ಲ ಸಹಾಯ ಪಡೆಯುತ್ತಾನೆ

ಆ. ಆಡಳಿತಗಾರರ ಮತ್ತು ಅರ್ಚಕರ ಕೃಪೆಗೆ ಒಳಪಡುತ್ತಾನೆ

ಇ. **ದೇವರೊಡನೆ ಹಗೆತನ ಬೆಳೆಸುತ್ತಾನೆ**

ಈ. ಸಿರಿವಂತನಾಗಿ ದೇಗುಲಗಳಿಗೆ ದೇಣಿಗೆ ನೀಡುತ್ತಾನೆ

12. ನಾವು ನಮ್ಮ ನೆರೆಹೊರೆಯವರಿಗೆ ಏಕೆ ನ್ಯಾಯತೀರ್ಪು ಕೊಡಬಾರದು?

ಅ. ಏಕೆಂದರೆ ನಂತರ ಅವರು ನಮ್ಮ ಮೇಲೆ ಸೇಡು ತೀರಿಸಿಕೊಳ್ಳುತ್ತಾರೆ.

ಆ. ಏಕೆಂದರೆ ಅವರು ನಮ್ಮ ತಪ್ಪುಗಳನ್ನು ಎತ್ತಿ ತೋರಿಸುತ್ತಾರೆ

ಇ. ಏಕೆಂದರೆ ನೆರೆಹೊರೆಯವರು ದೇವರ ಪ್ರೀತಿಗೆ ಪಾತ್ರರು.

ಈ. **ಏಕೆಂದರೆ ನ್ಯಾಯವಿಧಿಗಳನ್ನು ಕೊಟ್ಟವರೂ ನ್ಯಾಯಪತಿಯೂ ಒಬ್ಬರೆ; ಅವರೇ ಉದ್ಧಾರ ಮಾಡುವುದಕ್ಕೂ ವಿನಾಶಗೊಳಿಸುವುದಕ್ಕೂ ಶಕ್ತರು.**

13. ನೀವು ಅಸ್ವಸ್ಥರಾಗಿದ್ದರೆ ನೀವೇನು ಮಾಡಬೇಕೆಂದು ಹೇಳಲಾಗಿದೆ?

ಅ. **ಸಭಾಪಾಲಕರನ್ನು ಕರೆದು ಪ್ರಾರ್ಥಿಸಲು ಕೇಳಿಕೊಳ್ಳಬೇಕು.**

ಆ. ಗೋಣಿತಟ್ಟನ್ನು ಹಾಕಿ ಬೂದಿಯನ್ನು ಸಿಂಪಡಿಸಬೇಕು.

ಇ. ವೈದ್ಯರ ಬಳಿಗೆ ಹೋಗಿ ಅದಕ್ಕೆ ತಕ್ಕಂತೆ ಚಿಕಿತ್ಸೆಪಡೆಯಬೇಕು

ಈ. ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕು.

14. ಒಬ್ಬರಿಗೊಬ್ಬರು ಪಾಪಗಳನ್ನು ಒಪ್ಪಿಕೊಳ್ಳುವುದರಿಂದ ಆಗುವ ಪ್ರಯೋಜನವೇನು?

ಅ. ನಾವು ಕತ್ತಲೆಯಲ್ಲಿ ನಡೆಯುವುದಿಲ್ಲ

ಆ. ನಾವು ಆಶೀರ್ವದಿಸಲ್ಪಡುತೇವೆ

ಇ. ನಾವು ಪರಮ ಪ್ರಸಾದ ಸ್ವೀಕರಿಸಬಹುದು

ಈ. **ನಾವು ಸ್ವಸ್ಥರಾಗುತ್ತೇವೆ**

15. ನಾವು ಪಾಪಿಯನ್ನು ದುರ್ಮಾರ್ಗದಿಂದ ಮರಳಿ ಸನ್ಮಾರ್ಗಕ್ಕೆ ತಂದವರಿಗೆ ಸಿಗುವ ಲಾಭವೇನು?

ಅ. ನಾವು ದೇವರಿಂದ ಪ್ರತಿಫಲ ಪಡೆಯುತ್ತೇವೆ ಮತ್ತು ಭೂಮಿಯ ಆಡಳಿತಗಾರರು ನಮ್ಮನ್ನು ಗುರುತಿಸುತ್ತಾರೆ.

ಆ. ನಾವು ಕ್ರಿಸ್ತನ ಸೈನಿಕರಾಗುತ್ತೇವೆ ಮತ್ತು ಯೇಸುವಿಗಾಗಿ ಹೋರಾಡುತ್ತೇವೆ.

ಇ. **ನಾವು ಪಾಪಿಯ ಆತ್ಮವನ್ನು ಸಾವಿನಿಂದ ತಪ್ಪಿಸಿ ಪಾಪಗಳಿಗೆ ಕ್ಷಮೆಪಡೆಯುವಂತೆ ಮಾಡುತ್ತೇವೆ.**

ಈ. ನಮ್ಮನ್ನು ಕ್ರಿಸ್ತನ ರಾಯಭಾರಿಗಳು ಎಂದು ಕರೆಯಲಾಗುತ್ತದೆ; ಇದು ನಮ್ಮ ಗೌರವಕ್ಕೆ ಅರ್ಹವಾಗಿದೆ.

16. ನಮ್ಮ ನಡೆನುಡಿಗಳಲ್ಲಿ ನಾವು ಏಕೆ ಪವಿತ್ರರಾಗಿರಬೇಕು?

ಅ. **ಏಕೆಂದರೆ ನಮ್ಮನ್ನು ಕರೆದ ದೇವರು ಪವಿತ್ರ**

ಆ. ಏಕೆಂದರೆ ಪವಿತ್ರರಾಗಿರುವ ಯೇಸುವನ್ನು ಪರಮಪ್ರಸಾದದಲ್ಲಿ ಸ್ವೀಕರಿಸಬೇಕು.

ಇ. ಏಕೆಂದರೆ ನಾವು ದೀಕ್ಷಾಸ್ನಾನ ಪಡೆದ ಕ್ರೈಸ್ತರು

ಈ. ಏಕೆಂದರೆ ನಾವು ಕ್ರಿಸ್ತನನ್ನು ಪ್ರತಿನಿಧಿಸಬೇಕು

17. ಸಜೀವ ಶೀಲೆ ಎಂದು ಯಾರನ್ನು ಸಂಬೋಧಿಸಿ ಬರೆಯಲಾಗಿದೆ?

ಅ. ತಂದೆಯಾದ ದೇವರು

ಆ. **ಪ್ರಭುಯೇಸು**

ಇ. ಪೌಲ

ಈ. ಇಸ್ರಯೇಲ್

18. ದೇವರು ಕಾರ್ಗತ್ತಲಿನಿಂದ ಬೆಳಕಿಗೆ ನಮ್ಮನ್ನು ಕರೆತಂದು ನಮ್ಮನ್ನು ಆಯ್ದುಕೊಂಡ ಜನಾಂಗ, ದೇವರ ಸ್ವಕೀಯಜನ ಎಂದು ಏಕೆ ಕರೆದರು?

ಅ. ಕಾರಣ, ನಾವು ದೀಕ್ಷಾಸ್ನಾನ ಪಡೆದ ಕ್ರೈಸ್ತರು

ಆ. ಏಕೆಂದರೆ ನಾವು ಧರ್ಮಸಭೆಯ ಆಜ್ಞೆಗಳು ಹಾಗು ಸಂಸ್ಕಾರಗಳನ್ನು ಅನುಸರಿಸುತ್ತೇವೆ.

ಇ. **ದೇವರ ಅದ್ಭುತಕಾರ್ಯಗಳನ್ನು ಪ್ರಚುರಪಡಿಸಲು**

ಈ. ನಾವು ಲೋಕಕ್ಕೆ ಉಪ್ಪು ಮತ್ತು ಬೆಳಕಾಗಲು

19. ಅರಿವಿಲ್ಲದೆ ಮಾತನಾಡುವ ಮೂಢಜನರ ಬಾಯನ್ನು ಹೇಗೆ ಮುಚ್ಚಿಸಬಹುದು?

ಅ. **ನಮ್ಮ ಒಳ್ಳೆಯ ನಡತೆಯಿಂದ**

ಆ. ಬಡವರಿಗೆ ಸಹಾಯ ಮಾಡುವುದರಿಂದ

ಇ. ಸಮುದಾಯವನ್ನು ಸಂಘಟಿಸುವ ಮೂಲಕ

ಈ. ಅವರೊಡನೆ ಸಮಾಲೋಚನೆ ಮಾಡುವ ಮೂಲಕ

20. ಪುರುಷರು ಏಕೆ ತಮ್ಮ ಪತ್ನಿಯರೊಡನೆ ಸರಿಯಾದ ತಿಳುವಳಿಕೆಯಿಂದ ಸಹಜೀವನ ಮಾಡಬೇಕು?

ಅ. ಮದುವೆ ಸಮಯದಲ್ಲಿ ಮಾಡಿದ ಒಡಂಬಡಿಕೆಯ ಪ್ರತಿಜ್ಞೆಯಿದು

ಆ. **ಅವರೂ ಕೂಡ ತಮ್ಮ ಪತಿಯರೊಂದಿಗೆ ಸಜ್ಜೀವ ಕೊಡುಗೆಗೆ ಸಮಬಾಧ್ಯರು.**

ಇ. ಅವರು ತಮ್ಮ ಹೆಂಡತಿಯರನ್ನು ಪ್ರೀತಿಸುವ ಮತ್ತು ಗೌರವಿಸುವ ಸಂಸ್ಕಾರದಿಂದ ಬದ್ದರಾಗಿರುತ್ತಾರೆ

ಈ. ಮೇಲಿನ ಯಾವುದೂ ಇಲ್ಲ

21. ನಾವೇಕೆ ನಮ್ಮ ಚಿಂತೆಯನ್ನೆಲ್ಲಾ ದೇವರಿಗೇ ಬಿಟ್ಟುಬಿಡಬೇಕು?
ಅ. ಏಕೆಂದರೆ ಅವರು ನಮ್ಮ ಸೃಷ್ಠಿಕರ್ತ ಮತ್ತು ನಾವು ಅವರ ಜೀವಿಗಳು
ಆ. ಏಕೆಂದರೆ ಕ್ರೈಸ್ತರು ದೇವರ ಮೇಲೆ ಅವಲಂಬಿತರಾಗುವ ನಿರ್ಬಂಧವನ್ನು ಹೊಂದಿದ್ದೇವೆ.
ಇ. **ಏಕೆಂದರೆ ಅವರಿಗೆ ನಮ್ಮ ಮೇಲೆ ಲಕ್ಷ್ಯವಿದೆ.**
ಈ. ಮೇಲಿನ ಎಲ್ಲವೂ

22. ನಮ್ಮ ಶತ್ರುವಾಗಿರುವ ಸೈತಾನನು ಸಿಂಹದಂತೆ ಘರ್ಜಿಸಿದಾಗ ಏನು ಮಾಡಬೇಕು?
ಅ. **ನಾವು ವಿಶ್ವಾಸದಲ್ಲಿ ದೃಢವಾಗಿದ್ದು ಅವನನ್ನು ಎದುರಿಸಬೇಕು.**
ಆ. ನಾವು ಸಂತರ ಮಧ್ಯಸ್ತಿಕೆ ಯನ್ನು ಕೇಳಬೇಕು.

ಇ. ನಾವು ಧರ್ಮಸಭೆಯ ಹಿರಿಯರ ಸಹಾಯ ಪಡೆಯಬೇಕು.
ಈ. ನಾವು ನಮ್ಮ ಪಾಪಗಳನ್ನು ಒಬ್ಬೊಬ್ಬರಿಗೊಬ್ಬರು ನಿವೇದಿಸಬೇಕು.

23. ನಾವು ಕರೆಹೊಂದಿದವರು ದೇವರಿಂದ ಆಯ್ಕೆಯಾದವರು, ಈ ವರದಲ್ಲಿ ನಾವು ದೃಢವಾಗಿದ್ದರೆ ಏನಾಗುತ್ತದೆ?

ಅ. ನಮ್ಮನ್ನು ದೂತರು ಸ್ವರ್ಗಕ್ಕೆ ಕರೆದೊಯ್ಯುತ್ತಾರೆ.

ಆ. ನಮ್ಮನ್ನು ಸೈತಾನನು ಮುಟ್ಟುವುದಿಲ್ಲ

ಇ**. ನಾವೆಂದಿಗೂ ವಿಶ್ವಾಸಭ್ರಷ್ಟರಾಗುವುದಿಲ್ಲ.**

ಈ. ನಮ್ಮನ್ನು ಇಸ್ರಯೇಲಿನ 12 ಜನಾಂಗದವರನ್ನಾಗಿ ಪರಿಗಣಿಸಲಾಗುವುದು.

24. "ನಾನು ಈ ಗುಡಾರವನ್ನು ತ್ಯಜಿಸುವ ಕಾಲವು ಸಮೀಪಿಸಿತ್ತೆಂದು ಬಲ್ಲೆ. ನಮ್ಮ ಪ್ರಭುಕ್ರಿಸ್ತನೇ ನನಗಿದನ್ನು ಸ್ಪಷ್ಟಪಡಿಸಿದ್ದಾನೆ". ಇದನ್ನು ಹೇಳಿದವರು ಯಾರು?

ಅ. ಯೊವಾನ್ನ

ಆ. **ಪೇತ್ರ**

ಇ. ಯಕೋಬ

ಈ. ಯೂದ

25. "ಈತನು ನನ್ನ ಪುತ್ರ; ನನಗೆ ಪ್ರಿಯನಾದವನು" ಎಂಬ ಮಹೋನ್ನತವಾಣಿಯನ್ನು ಸ್ವತಃ ಕೇಳಿಸಿಕೊಂಡೆನು ಎಂದವರು ಯಾರು?

ಅ. ಯಕೋಬ

ಆ. ಯೊವಾನ್ನ

ಇ. ಪೌಲ

ಈ. **ಪೇತ್ರ**

26. "ನಾಯಿ ತಾನು ಕಕ್ಕಿದ್ದನ್ನೇ ನೆಕ್ಕಲು ಹೋಯಿತು" ಈ ಗಾದೆ ಯಾರಿಗೆ ಅನ್ವಯಿಸುತ್ತದೆ?

ಅ. **ಕಳ್ಳಬೋಧಕರಿಗೆ**

ಆ. ಬಡವರಿಗೆ ಸಹಾಯ ಮಾಡದವರಿಗೆ

ಇ. ಪ್ರಾಣಿಗಳಿಗೆ

ಈ. ಕಾನೂನು ಪಾಲಿಸದವರಿಗೆ

27. ಪ್ರಭುವಿನ ದಿನ ಹೇಗೆ ಬರುತ್ತದೆ?

ಅ. ಕಳ್ಳನಂತೆ, ಆಗ ಪವಿತ್ರಾತ್ಮರು ಎಲ್ಲರ ಮೇಲೆ ಇಳಿದು ಬರುತ್ತಾರೆ

ಆ. ಕಳ್ಳನಂತೆ, ಆಗ ಎಲ್ಲರೂ ದೇವರೊಂದಿಗೆ ಒಂದಾಗುತ್ತಾರೆ

ಇ. **ಕಳ್ಳನಂತೆ, ಆಗ ಆಕಾಶಮಂಡಲವು ಸಿಡಿಲ ಗರ್ಜನೆಯೊಂದಿಗೆ ಅಳಿದು ಹೋಗುವುದು.**

ಈ. ಮೇಲಿನ ಯಾವುದೂ ಇಲ್ಲ

28. ನಾವು ನಮ್ಮ ಪಾಪಗಳನ್ನು ಒಪ್ಪಿಕೊಂಡರೆ ಏನಾಗುತ್ತದೆ?

ಅ. **ನಂಬಿಕಸ್ಥರೂ ನೀತಿವಂತರೂ ಆದ ದೇವರು ನಮ್ಮ ಪಾಪಗಳನ್ನು ಕ್ಷಮಿಸಿ ಶುದ್ದೀಕರಿಸುತ್ತಾರೆ.**

ಆ. ಈ ಸಂಸ್ಕಾರದ ಮೂಲಕ ಪಾಪದಿಂದ ಮುಕ್ತಿ ಎಂಬ ಅನುಗ್ರಹವನ್ನು ನಮಗೆ ದಯಪಾಲಿಸುವನು.

ಇ. ಕರುಣೆಯಿಂದ ಸಮೃದ್ಧವಾಗಿರುವ ದೇವರು ನಮ್ಮನ್ನು ನೋಡಿಕೊಳ್ಳು ತನ್ನ ದೂತರಿಗೆ ಆಜ್ಞಾಪಿಸುವನು.

ಈ. ನಮ್ಮ ಪಾಪಗಳನ್ನು ಕ್ಷಮಿಸಿ ಮೋಶೆಗೆ ಮಾಡಿದಂತೆ ಆತನ ಮಹಿಮೆಯನ್ನು ನಮಗೆ ತಿಳಿಸುವರು.

29. ಕ್ರಿಸ್ತವಿರೋಧಿಯ ಬರುವಿಕೆಯು ಏನನ್ನು ಸೂಚಿಸುತ್ತದೆ?
ಅ. ಇದು ಕ್ರಿಸ್ತನ ಪುನರುತ್ಥಾನವನ್ನು ಸೂಚಿಸುತ್ತದೆ.
ಆ. ಜನರು ತಮ್ಮ ಪಾಪಗಳಿಗೆ ಪಶ್ಚಾತಾಪಪಡುವುದನ್ನು ಸೂಚಿಸುತ್ತದೆ.
ಇ. **ಇದು ಅಂತಿಮಕಾಲ ಸನ್ನಿಹಿತವಾಯಿತ್ತೆಂದು ಸೂಚಿಸುತ್ತದೆ.**

ಈ. ಇದು ಮುಂಬರುವ ಕಠಿಣ ನಿಯಮದ ಸಮಯವನ್ನು ಸೂಚಿಸಿದರು

30. ಅಸತ್ಯವಾದಿ ಯಾರು?

ಅ. ಕ್ರಿಸ್ತರಿಗೆ ವಿರೋಧವಾದವನು

ಆ. **ಪಿತನನ್ನು ಹಾಗೂ ಪುತ್ರನನ್ನು ನಿರಾಕರಿಸುವವನು**

ಇ. ಕ್ರಿಸ್ತರು ಹಿಂಸೆಗೊಳಗಾಗುವುದನ್ನು ನೋಡಿ ಆನಂದಿಸುವವನು

ಈ. ಮೇಲಿನ ಯಾವುದೂ ಅಲ್ಲ

31. ದೇವರಿಂದ ಜನಿಸಿದ ಯಾವನೂ ಪಾಪ ಮಾಡನು. ಏಕೆಂದರೆ.................

ಅ. ಅವರಿಗೆ ದೇವರ ವಿಶೇಷ ಆಶೀರ್ವಾದವಿದೆ

ಆ. ದೇವರು ಕರುಣಾಮಯಿ; ಅವರು ಎಲ್ಲರ ಪಾಪಗಳನ್ನು ಕ್ಷಮಿಸುತ್ತಾರೆ

ಇ. ದೀಕ್ಷಾಸ್ನಾನ ಪಡೆದಿರುವವರೆಲ್ಲರ ಪಾಪಗಳು ಕ್ಷಮಿಸಲ್ಪಡುತ್ತವೆ.

ಈ**. ದೇವರ ಜೀವದಕುಡಿ ಅವರಲ್ಲಿರುತ್ತದೆ.**

32. ಯೊವಾನ್ನನ ಪ್ರಕಾರ, ಯೇಸುವಿಗೆ ಸಾಕ್ಷಿಯಾಗಿರುವವರು ಇವರು............

ಅ. ಮಾರ್ಕ, ಮತ್ತಾಯ ಮತ್ತು ಲೂಕನು

ಆ. **ಪವಿತ್ರಾತ್ಮ, ಜಲ ಮತ್ತು ರಕ್ತ**

ಇ. ಪವಿತ್ರಾತ್ಮರು, ಸಂತರು ಮತ್ತು ದೇವದೂತರು

ಈ. ಸುವಾರ್ತಬೋಧಕರು, ಪ್ರವಾದಿಗಳು ಮತ್ತು ಕೀರ್ತನೆಗಾರರು

33. 'ಅ' ಕಾರವೂ 'ಳ'ಕಾರವೂ – ಇದನ್ನು ಹೀಗೆ ವಿವರಿಸಲಾಗಿದೆ:

ಅ. **ವರ್ತಮಾನ ಕಾಲದಲ್ಲಿ 'ಇರುವಾತನೂ' ಭೂತಕಾಲದಲ್ಲಿ 'ಇದ್ದಾತನೂ' ಭವಿಷ್ಯತ್ಕಾಲದಲ್ಲಿ 'ಬರುವಾತನೂ' ಸರ್ವೇಶ್ವರ**

ಆ. ಇವುಗಳು ಗ್ರೀಕ್ ದೇವರ ಮತ್ತು ದೇವತೆಗಳ ಹೆಸರುಗಳಾಗಿವೆ.

ಇ. ಇವು ಒಂದು ಭಾಷೆಯ ವರ್ಣಮಾಲೆಗಳಾಗಿವೆ

ಈ. ವ್ಯಕ್ತಿಗತವಾದ ಪ್ರೀತಿ ; ಬೆಳಕು ಮತ್ತು ಜ್ಞಾನೋದಯ

34. ಯಾವ ಏಳು ಪಟ್ಟಣಗಳಿಗೆ ದರ್ಶನದ ಸಂದೇಶವನ್ನು ತಿಳಿಸಲು ವಾಣಿ ತಿಳಿಸಿತು?

ಅ. ರೋಮ, ಕೋರಿಂಥ, ಗಲಾತ್ಯ, ಥೆಸಲೋನಿಕ, ಫಿಲಿಪ್ಪಿ, ಬೆರೂಯ, ಎಫೆಸ

ಆ. ಸೈಪ್ರುಸ್. ಪೆರ್ಗ, ಅಂತಿಯೋಕ್ಯ, ಇಕೊನಿಯಮ್, ಲಿಸ್ಟ್ರ, ದರ್ಬೆ, ಪಾಂಪಿಲಿಯ

ಇ. **ಎಫೆಸ, ಸ್ಮುರ್ನ, ಪೆರ್ಗಮ, ಥುವತ್ಯೈರ, ಸಾರ್ದಿಸ್, ಫಲದೆಲ್ಫಿಯ, ಲವೋದಿಕೀಯ**

ಈ. ಮೇಲಿನ ಯಾವುದೂ ಇಲ್ಲ

35. ಏಳು ನಕ್ಷತ್ರಗಳು ಹಾಗು ಏಳು ಚಿನ್ನದ ದೀಪಸ್ತಂಭದ ರಹಸ್ಯವೇನು?

ಅ. ಏಳು ನಕ್ಷತ್ರಗಳು ಏಳು ಸಭೆಯನ್ನೂ ಮತ್ತು ಏಳು ದೀಪಸ್ತಂಭಗಳು ಏಳು ದೀಪಗಳನ್ನು ಸೂಚಿಸುತ್ತವೆ.

ಆ. **ಏಳು ನಕ್ಷತ್ರಗಳು ಏಳು ದೇವದೂತರನ್ನೂ ಮತ್ತು ಏಳು ದೀಪಸ್ತಂಭಗಳು ಏಳು ಸಭೆಗಳನ್ನು ಸೂಚಿಸುತ್ತವೆ.**

ಇ. ಏಳು ನಕ್ಷತ್ರಗಳು ಏಳು ಸಭೆಯ ಹಿರಿಯರನ್ನೂ ಏಳು ದೀಪಸ್ತಂಭಗಳು ಏಳು ಧರ್ಮಾಧಿಕಾರಿಗಳನ್ನು ಸೂಚಿಸುತ್ತದೆ.

ಈ. ಏಳು ನಕ್ಷತ್ರಗಳು ಏಳು ಸಭೆಯ ಮಂತ್ರಿಗಳನ್ನೂ, ಮತ್ತು ಏಳು ದೀಪಸ್ತಂಭಗಳು ಏಳು ಪುಸ್ತಕಗಳನ್ನೂ ಸೂಚಿಸುತ್ತದೆ.

36. ತನ್ನನ್ನು ಪ್ರವಾದಿ ಎಂದು ಕರೆದುಕೊಳ್ಳುವ ಮಹಿಳೆ ಯಾರು?

ಅ. ಮಿರ್ಯಾಮಳು

ಆ. ದೆಬೋರಾ

ಇ. **ಇಸಬೇಲ್**

ಈ. ಹುಲ್ದ

37. " ನಾನು ನಿನ್ನನ್ನು ನನ್ನ ಬಾಯಿಯೊಳಗಿಂದ ಕಕ್ಕುತ್ತೇನೆ" ಎಂದು ಯಾರನ್ನು ಎಚ್ಚರಿಸಲಾಗಿದೆ?

ಅ. **ಲವೊದಿಕೀಯದ ಸಭೆಗೆ**

ಆ. ಪಿಸಿಡಿಯದ ಅಂತಿಯೋಕ್ಯದ ಸಭೆಗೆ

ಇ. ಮೆಸಪೋಟಮಿಯದ ಸಭೆಗೆ

ಈ. ಪಾಟ್ಮೋಸ್ ನಲ್ಲಿರುವ ಸಭೆಗೆ

38. ಸುರುಳಿಯನ್ನುತೆರೆದು ಅದರ ಮುದ್ರೆಯನ್ನು ಯಾರು ಮುರಿಯಬಹುದು?

ಅ. ಸಿಂಹನೆಂದು ಕರೆಯಲ್ಪಡುವ ಪೇತ್ರ

ಆ. **ಯೂದ ಕುಲದ ಸಿಂಹವೂ, ದಾವೀದನ ವಂಶಜದವನು**

ಇ. ಸಿಂಹವೆಂದು ಪರಿಗಣಿಸಲ್ಪಡುವ ರೋಮನ್ನರು

ಈ. ದೇವಜನರ ಮೇಲೆ ಘರ್ಜಿಸುವ ಸಿಂಹ

39. ಸಿಂಹಾಸನದ ಪ್ರತಿಯೊಂದು ಬದಿಯಲ್ಲಿರುವ ನಾಲ್ಕು ಜೀವಿಗಳನ್ನು ಇಂದು ನಾವು ನಾಲ್ಕು ಶುಭಸಂದೇಶಗಳ ಸಂಕೇತಗಳಾಗಿ ಬಳಸಲ್ಪಟ್ಟಿದೆ. ಅವು ಯಾವುವು?

ಅ. ಒಂಟೆ, ಹೋರಿ, ಹಸು ಮತ್ತು ಬೆಳವಳಹಕ್ಕಿ

ಆ. ಬೆಳವಳಹಕ್ಕಿ, ಪಾರಿವಾಳ, ಹದ್ದು ಮತ್ತು ಗುಬ್ಬಚ್ಚಿ

ಇ. **ಸಿಂಹ, ಹೋರಿ, ಮಾನವನ ಮುಖ ಮತ್ತು ಗರುಡ**

ಈ. ಮೇಲಿನ ಯಾವುದೂ ಇಲ್ಲ

40. ಮಿಕಾಯೇಲನು ತನ್ನ ಸಹದೂತರ ಸಹಿತ .................. ವಿರುದ್ಧ ಹೋರಾಡಿದರು?

ಅ. ಸ್ವರ್ಗದಲ್ಲಿರುವ ದೇವದೂತರ ವಿರುದ್ಧ

ಆ. ಕಾದೇಸಿನ ಯುದ್ಧಭೂಮಿಯಲ್ಲಿ ಅವರ ಶತ್ರುಗಳ ವಿರುದ್ಧ

ಇ. ವಿಶ್ವಕ್ರಮಾಂಕಕ್ಕೆ ಭಂಗ ತಂದವರ ವಿರುದ್ಧ

ಈ. **ಘಟಸರ್ಪ/ಸೈತಾನನ ವಿರುದ್ಧ**